ಕುಣಿಗಲ್ ತಾಲ್ಲೂಕಿನಲ್ಲಿ ಕೇಂದ್ರದವತಿಯಿಂದ ರೇಷ್ಮೆ ಕೃಷಿ ಆಧಾರಿತ ಕೈಗಾರಿಕೆಯನ್ನು ಸ್ಥಾಪಿಸುವ ವಿಚಾರ

201 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್): ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕುಣಿಗಲ್ ತಾಲ್ಲೂಕಿನಲ್ಲಿ ಕೇಂದ್ರದವತಿಯಿಂದ ರೇಷ್ಮೆ ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ಪ್ರಸ್ತಾಪನೆಯನ್ನು ಸಲ್ಲಿಸಿದೆಯೇ.

2) ಹಾಗಿದ್ದಲ್ಲಿ ಪ್ರಸ್ತಾವನೆಯ ಅಂದಾಜು ವೆಚ್ಚವೆಷ್ಟು

3) ಕುಣಿಗಲ್ ತಾಲ್ಲೂಕಿನಲ್ಲಿ ರೇಷ್ಮೆ ಆಧಾರಿತ ಜಂಟಿ ಉದ್ಯಮದ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದೆಯೆ.

4) ಪ್ರಸ್ತಾಪನೆಯ ಯೋಜನೆಗೆ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದುಕೊಳ್ಳಲು ತೆಗೆದುಕೊಂಡ ಕ್ರಮ.

ಶ್ರೀ ಬಿ. ಮುನಿಯಪ್ಪ (ರಾಜ್ಯ ರೇಷ್ಮೆ ಸಚಿವರು) :

1) ಇಲ್ಲ.

2) ಉದ್ಭವಿಸುವುದಿಲ್ಲ.

3) ಇಲ್ಲ.

4) ಉದ್ಭವಿಸುವುದಿಲ್ಲ.

ಬೆಂಗಳೂರು – ಮಂಗಳೂರು ರಸ್ತೆಯಲ್ಲಿ ರಸ್ತೆಬದಿ ಮೊಟೆಲ್‌ಗಳು

203 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು-ಮಂಗಳೂರು ರಸ್ತೆಯಲ್ಲಿ ರಸ್ತೇ ಬದಿ ಮೊಟೆಲ್‌ಗಳ ಸಂಖ್ಯೆ ಎಷ್ಟು?

2) ಕುಣಿಗಲ್ ಬಳಿ ರಸ್ತೆ ಬದಿ ಮೊಟೆಲ್ ಇದೆಯೇ?

3) ಬೆಂಗಳೂರು-ಮಂಗಳೂರು ರಸ್ತೆಯಲ್ಲಿ ಇನ್ನೂ ಹೆಚ್ಚಿನ ರಸ್ತೆಬದಿ ಮೊಟೆಲ್‌ಗಳನ್ನು ನಿರ್ಮಿಸುವ ಯೋಜನೆ ಇದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

1) ಹಾಸನದಲ್ಲಿ ಐ.ಟಿ.ಡಿ.ಸಿ ಮೊಟೆಲ್ ಮಾತ್ರ ಇದೆ.

2) ಇಲ್ಲ.

3) ಇಲ್ಲ.

ಕುಣಿಗಲ್ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣ

204 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್ 1990ರ ಅಂತ್ಯದವರೆಗೆ ಕುಣಿಗಲ್ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ಬಂದಿರುವ ಅರ್ಜಿಗಳ ಸಂಖ್ಯೆ?

ಆ) ಇವುಗಳಲ್ಲಿ ವಿದ್ಯುದ್ದೀಕರಣವಾಗಿರುವ ನೀರಾವಾರಿ ಪಂಪು ಸೆಟ್ಟುಗಳ ಸಂಖ್ಯೆ.

ಇ) ಕುಣಿಗಲ್ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಈ) ಬಾಕಿ ಉಳಿದಿರುವ ಎಲ್ಲಾ ಅರ್ಜಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?